ಕೆಲಸನಾದ್ರೂ ಆತು. ಆಕಿ ಹೀಂಗs ಅದಾಳು, ಹಂಗ ಅದಾಳ, ಊರೂರ ತಿರುಗಿ ಬಂದಾಳ ಅಂತ ಹೇಳೋವ್ರಿಗೆ ನಾಚಿಕೆ ಬರಬೇಕು. ಗಂಡ ಕೆಟ್ಟ ಇದ್ದಂಥ ಹೆಂಗಸಿನ ಕಷ್ಟ ಇವರಿಗೇನು ಗೊತ್ತು? ಮಾಯಕ್ಕ ಅಂದ್ರ ಮಾಯಕ್ಕ, ಆಕಿ ಮುಂದ ಯಾರು ಇಲ್ಲಕ್ಕ' ಅಂತ ಇಲೆಕ್ಸನ್‌ದಾಗ ಹೇಳಿದ್ದು ಖರೆ ಆತು ನೋಡವಾ.' ನಗುವಿನ ಅಲೆಗಳು ಮಲ್ಲೂರಿನ ತುಂಬ ಹರಡುತ್ತಿದ್ದವು.

ಇನ್ನೇನು ಸಂಜೆ ತೀರಿ ಹೋಗಿ ಸುತ್ತಲೂ ಕತ್ತಲು ಆವರಿಸುತ್ತಿದೆಯೆನ್ನುವಾಗ ಕೆಂಪು ಬಸ್ಸೊಂದು ಬರಲೋ ಬೇಡವೋ ಎಂಬಂತೆ ಬಂದು ತನ್ನ ಕ್ಷೀಣ ಹೆಡ್‌ಲೈಟ್‌ಗಳ ಬೆಳಕನ್ನು ಆ ಬಸ್ಸಿಗಾಗಿ ಕಾದಿದವರ ಮೇಲೆ ಹಾಯಿಸಿತು. ಒಡನೆಯೆ ಮಲ್ಲೂರಿನ ಮಂದಿಯೆಲ್ಲ ಧನ್ಯತಾಭಾವದಿಂದ ಕೃತಾರ್ಥರಾದವರಂತೆ ಹೋ ಎಂದು ಚೀರುತ್ತ ತುಂಡು ಬೆಲ್ಲಕ್ಕೆ ನೂರಾರು ಇರುವೆಗಳು ಮುತ್ತಿಕ್ಕಿದಂತೆ ಅದನ್ನು ಮುತ್ತಿಕೊಂಡರು. ಅಳುವ ಮಕ್ಕಳನ್ನು ಒಡೆದ ಕಿಟಕಿಗಳ ಮೂಲಕ ಇಳಿಸಿ ತಮ್ಮ ಸೀಟುಗಳನ್ನು ಹಿಡಿದುಕೊಂಡರು. ಮಾಯಕ್ಕ ಮತ್ತು ಶಿವಣ್ಣನ ಸಲುವಾಗಿ ಮಂದಿ ಮೂರ್ನಾಲ್ಕು ಕಡೆ ಸೀಟು ಹಿಡಿದು, 'ಅಕ್ಕಾ, ಬರ್ರಿ ಇಲ್ಲಿ' ಎಂದು ಕರೆದರು.

'ನಮ್ಮ ಸಲುವಾಗಿ ಯಾಕ ತ್ರಾಸ ತಗೋತಿರಿ? ನೀವು ಕುದ್ರೆಪಾ' ಎನ್ನುವ ಬೆಲ್ಲದ ಮಾತುಗಳನ್ನಾಡುತ್ತ ಆಕೆ ಕುಳಿತುಕೊಂಡಳು. ತನ್ನ ಪಕ್ಕ ಕುಳಿತ ಗಂಡನನ್ನು ಎಬ್ಬಿಸಿ 'ನೀವು ಅಲ್ಲಿ ಎಲ್ಲ ಗಂಡಸರ ಹತ್ತಿರ ಜಾಗ ಮಾಡಿಕೊಂಡ ಕುಂತ್ಕೊಳ್ರಿ. ಪಾಪ! ಇಲ್ಲೊಬ್ಬಾಕಿ ಹೊಟ್ಟೀಲಿ ಇರೊ ತಂಗಿ ಅದಾಳ' ಎಂದು ಅವಳ ಸಮೀಪ ಎದ್ದು ನಿಂತಿದ್ದ ಗರ್ಭಿಣಿ ಹೆಂಗಸೊಬ್ಬಳನ್ನು ಆತ್ಮೀಯತೆಯಿಂದ ಕೈ ಹಿಡಿದು ಕುಳ್ಳಿರಿಸಿದಳು. ಆ ಗರ್ಭಿಣಿಯ ಮುಖ ಇಷ್ಟಗಲವಾಗಿ ಅವಳ ಹೊಟ್ಟೆಯೊಳಗಿನ ಮಗು ಕೂಡ ಕಿಲಕಿಲ ಎಂದಂತಾಯಿತು. ಬಸ್ಸು ಇನ್ನೇನು ಹೊರಡಬೇಕೆನ್ನುವಾಗ ಬಸ್ಸಿನಲ್ಲಿಯ ಯಾರೋ ಒಂದಿಬ್ಬರು 'ತರಬ್ರಿ, ಗಾಡಿ ತರಬೋ ಯಣ್ಣಾ' ಸಿದ್ದಣ್ಣ ಬರಲಿಕ್ಕೆ ಹತ್ಯಾನ, ತಡೀರಿ' ಎಂದರು. ಒಂದಷ್ಟು ಮಂದಿ ಕಿಡಕಿಯಲ್ಲಿ ಹಣಿಕಿ ಹಾಕಿದರು. ಒಂದು ಹರಕು ಚೀಲವನ್ನು ಕೈಯಲ್ಲಿ ಹಿಡಿದುಕೊಂಡು ದಾಪುಗಾಲಿಟ್ಟು ಬರುತ್ತಿದ್ದ. ಅವನು ಹಾಕಿಕೊಂಡಿದ್ದ ಅಂಗಿ ಪಾಯಿಜಾಮಗಳ ಬಣ್ಣ ಬಿಳಿ ಎಂದು ಗೊತ್ತಾಗದಷ್ಟು ಅವು ಹೊಲಸಾಗಿದ್ದವು. ಅವನು ಪಂಚಾಯತಿ ಅಧ್ಯಕ್ಷನಾಗಿದ್ದಾಗ ಹೊಲಿಸಿದವುಗಳಿರಬೇಕು. ಅವೇ ಒಂದೆರಡು ಜತೆ ಪ್ಯಾಂಟು ಅಂಗಿಗಳನ್ನು ಇಂದಿಗೂ ತೊಡುತ್ತಿದ್ದಾನೆ. ಮಾಯಕ್ಕ ಶಿವಣ್ಣ ಅವರು ಹೊಸ ಬಟ್ಟೆಗಳನ್ನು ಕೊಡಿಸಿದ್ದರೂ ಅವುಗಳನ್ನು ಮನೆಯ ಮೂಲೆಯಲ್ಲಿ ಸುಮ್ಮನೆ ಒಗೆದಿದ್ದಾನೆ. ಕಮಟು ವಾಸನೆಯ, ಕಾಲರ್‌ತೋಳು ಹರಿದಿರುವ, ಕೆಲವು ಕಡೆ ಪಿಸಿದಿರುವ, ಅಂಗಿಯ ಬಟನ್ ಕಿತ್ತು ಹೋಗಿರುವ ಬಿಳಿ ಉಡುಗಿಯನ್ನೆ ತೊಡುತ್ತಾನೆ. ಒಮ್ಮೊಮ್ಮೆ ತಾನಿನ್ನೂ ಜನಪ್ರತಿನಿಧಿ ಎನ್ನುವಂತೆ ಎಲ್ಲರಿಗೂ ಎರಡೂ ಕೈ ಜೋಡಿಸಿ ನಮಸ್ಕಾರ ಮಾಡುತ್ತಾನೆ. ಮಂದಿ ನಗುತ್ತಲೆ ನಮಸ್ಕರಿಸುವರು. ಈಗ ಓಡೋಡಿ ಬಂದು ಬಸ್ ಹತ್ತಿದ. 'ರೈಟ್' ಎಂದು ಹಲವಾರು ಮಂದಿ ಕೂಗಿದ ಮೇಲೆ ಬಸ್ಸು ಹೊರಟಿತು.

ಯಾರಾರೋ ದೊಡ್ಡ ಮನಸ್ಸು ಮಾಡಿ ಆಗೀಗ ಅವನ ಟಿಕೆಟ್ ತೆಗೆಸುತ್ತಿದ್ದರು. ಒಮ್ಮೊಮ್ಮೆ 'ರೊಕ್ಕ ಇಲ್ಲದ ಯದಕ ಹತ್ತೀದಿ?' ಎಂದು ಬೈಯ್ಯುತ್ತಿದ್ದರು. ಇವತ್ತು ಮಾಯಕ್ಕ ಎಲ್ಲರಿಗಿಂತ ಮೊದಲೆ ಅವನ ಟಿಕೇಟನ್ನು ತಗೊಂಡಳು. ಆಕೆಗೆ ನಮಸ್ಕಾರ ಮಾಡಹೊರಟ ಅವನನ್ನು ಮಂದಿ ತಡೆದು 'ಕುಂದ್ರ ಬಾ ಇಲ್ಲಿ' ಎಂದು ಕುಳ್ಳಿರಿಸಿದರು. ಅಕಸ್ಮಾತ್ ಏನಾದರು ಮಾಡಿಯಾನು ಎಂದು ಎಚ್ಚರ ವಹಿಸುವುದು ಸಾಮಾನ್ಯವಾಗಿತ್ತು. 'ಹೆಂಗರ ಆಗಿ ಏನಾರ ಆಗಿ ಸಿದ್ದು ಮೊದಲಿನಂಗ ಆದ್ರ ಸಾಕು' ಎಂದು ಮನೆಯವರ ಜೊತೆಗೆ ಮಂದಿಯೂ ಅವನ ದೈನ್ಯದ ಮುಖ ನೋಡಿ ಅಂದುಕೊಳ್ಳುವರು. ಭರ್ ಅಂತ ಬಸ್ ಮುಂದಕ್ಕೆ ಚಲಿಸುತ್ತಿದ್ದರೆ ಎಲ್ಲರ ಮನಸ್ಸುಗಳು ಹಿಂದಿನ ದಿನಗಳತ್ತ ಚಲಿಸುವವು.

ಬಂಗಾರದ ದೊಡ್ಡ ಗುಡ್ಡವೆ ತಮ್ಮ ಹೊಲಕ್ಕೆ ಬಂದು ಬಿದ್ದಂತೆ ಕಾಣುತ್ತಿದ್ದ ಮೆಕ್ಕೆಜೋಳದ ರಾಶಿಯ ಮೇಲೆ ನಿನ್ನೆಯಷ್ಟೇ ಅವ್ವ ಪೇಟೆಯಲ್ಲಿ ಸಾಲ ಮಾಡಿ ತಂದಿದ್ದ ತಾಡಪತ್ರಿಯನ್ನು ಜಗ್ಗಿ ಎಳೆದ ಸಿದ್ದಣ್ಣ ಅದು ಗಾಳಿಗೆ ಹಾರಬಾರದೆಂದು ಅದರ ಮೇಲೆ ಮತ್ತು ಅದರ ಸುತ್ತಲೂ ಗುಂಡುಕಲ್ಲು ಇಟ್ಟು, ಹೊಳೆಯುತ್ತಿದ್ದ ಹೊನ್ನ ಬಣ್ಣದ ಕಾಳುಗಳು ಯಾರಿಗೂ ಕಾಣಿಸುವುದಿಲ್ಲವೆಂದು ಖಾತ್ರಿಯಾದ ಮೇಲೆ ತುಸು ಆರಾಮ ತೆಗೆದುಕೊಳ್ಳುವವನಂತೆ ರಾಶಿಗೆ ಬೆನ್ನು ಹಚ್ಚಿ ಕುಳಿತನು. ಅವನೊಬ್ಬನೆ ಈಗ ಕಣದಲ್ಲಿ ಕುಳಿತು ಆ ಕಡೆ, ಈ ಕಡೆ, ಹೊತ್ತು ಮುಳುಗುತ್ತಿದ್ದ ಮುಗಿಲ ಕಡೆ ದೃಷ್ಟಿ ನೆಟ್ಟ. ಭೂಮಿಯಂಚಿನ ಆಕಾಶದ ಕೆಂಪು ನೇರಳೆಯ ಕಿರಣಗಳು ಸಿದ್ದಣ್ಣನ ಮುಖದ ಮೇಲೆ ಬಿದ್ದು ಅವನ ಹರೆಯಕ್ಕೆ ಬಣ್ಣ ತೊಡಿಸಿದ್ದವು. ದಣಿದ ಮೊಗದಲ್ಲಿ ಮೂಡಿದ್ದ ಬೆವರಿನ ಹನಿಗಳು ನಾನಾ ಬಣ್ಣಗಳಿಂದ ಹೊಳೆದವು. ಈ ವರ್ಷವಾದರೂ ಇಷ್ಟು ಫಸಲು ಕೈಗೆ ಬಂತಲ್ಲ ಎಂಬ ತೃಪ್ತಿಯಿಂದ ಇನ್ನೂ ಅಷ್ಟಾಗಿ ಮೂಡಿರದಿದ್ದ ಎಳೆಮೀಸೆಯ ಮೇಲೆ ಸುಮ್ಮನೆ ಕೈಯಾಡಿಸಿದ, ನಿನ್ನೆಯಿಂದಲೆ ಅವ್ವನೊಂದಿಗೆ ಆ ಹಿಗ್ಗನ್ನು ಹಂಚಿಕೊಳ್ಳುತ್ತಲಿದ್ದ. ಗೋವಿನ ಜೋಳದ ದೊಡ್ಡ ದೊಡ್ಡ ತೆನೆ ನೋಡಿಯೆ ಈ ವರ್ಷದ ರಾಶಿ ಪಸಂದಾಗಬಹುದು ಎಂದು ಅವನಿಗೆ ಅನ್ನಿಸಿತ್ತು. ಹಸಿ ಕಾಳು ಇದ್ದಾಗ ಒಂದು ತೆನೆ ಸುಟ್ಟು ತಿಂದರೆ ರಾಶಿಗೆ ಎಲ್ಲಿ ಕಡಿಮೆ ಆದೀತೋ, ಎಲ್ಲಿ ಸಾಲ ತೀರದೆ ಉಳಿದೀತೊ, ಎಲ್ಲಿ ಬರೀ ದಲಾಲರಿಗೆ ಮಾರುವದಾದೀತೋ ಎಂದು ತಾಯಿ ಮತ್ತು ಮಗ ಕಷ್ಟಪಟ್ಟು ಉಳಿಸಿದ್ದರು. ಚೀಲಗಳನ್ನು ತುಂಬಿ ಚಕ್ಕಡಿಗೆ ಹೇರುವ ತನಕ ಅವರಿಬ್ಬರಿಗೂ ನಿದ್ದೆಯಿಲ್ಲ. ಅದಕ್ಕಾಗಿಯೆ ಕಿರಿಯ ಮಗ ಸಿದ್ದಣ್ಣನನ್ನು ಹೊಲದಲ್ಲಿ ದುಡಿಸುತ್ತಿದ್ದಾಳೆ. ಅವ್ವ ಹೇಳುವ ತನಕ ಸಿದ್ದು ರೆಪ್ಪೆಗೆ ರೆಪ್ಪೆ ಹಚ್ಚಲಾರನು. ಹೊಲದ ಒಂದು ಕಾಳು ಕಳ್ಳತನವಾಯಿತೆಂದರೂ ಅದರಿಂದ ತಾಯಿಗೆ ಆಗುವ ನೋವು ಅಷ್ಟಿಷ್ಟಲ್ಲ. ಹೊಲವನ್ನು ಬೇಲಿ ಮೇಯ್ದಂತೆ ಅಣ್ಣಂದಿರೆ ಹೊಲದ ಮಾಲನ್ನು ಕದ್ದು ಸಾಗಿಸುತ್ತಿರುವುದಕ್ಕೆ ಸಿದ್ದೂನ ರಕ್ತ ಕೊತ ಕೊತ ಕುದಿಯುವುದು. ಒಬ್ಬ ಅಣ್ಣ ತನ್ನ ಮಾವನಿಗಾಗಿ ರಾತ್ರಿ ಮಾಲು ಸಾಗಿಸುತ್ತಿದ್ದರೆ ಮತ್ತೊಬ್ಬ ತಾನು ಪ್ರೀತಿಸುತ್ತಿರುವ ಹೆಂಗಸಿಗಾಗಿ ತಾಯಿ ದುಡಿದಿದ್ದನ್ನು ಗುಳುಂ ಮಾಡುತ್ತಾನೆ. ಇಷ್ಟು ದಿನ ಅವರು ಅವ್ವನನ್ನು ಕಣ್ಣೀರಿನಲ್ಲಿ ಕೈ ತೊಳೆಸಿದ್ದು ಸಾಕು. ತಾಯಿಯ ಕಣ್ಣಲ್ಲಿ ನೀರು ಬಂದರೆ ಅಯ್ಯೋ ತಾನು ಸುಮ್ಮನಿರುವುದೆ? ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ ಎಂದು ಶಪಥ ಮಾಡುವನು. ಅಣ್ಣಂದಿರು ಅವ್ವನ ಮಾತು ಕೇಳಲಿಲ್ಲ. ತಾನಾದರೂ ಕೇಳಬೇಕು. ತಾನು ತಾಯಿಗೆ ತಕ್ಕ ಮಗನಾಗಬೇಕು. ಸಿದ್ದಣ್ಣನ ಮನಸ್ಸಿನ ತುಡಿತ ಅವನನ್ನು ಕಾಲೇಜು ತಪ್ಪಿಸಿ ಹೊಲದಲ್ಲಿ ಮೈಮುರಿದು ದುಡಿಯುವಂತೆ ಮಾಡಿದೆ.

ರಣಗುಡುವ ಬಿಸಿಲು ಮುಗಿದು ವಾತಾವರಣ ತಣ್ಣಗಾಗಿದ್ದರೂ ಮುಖದಲ್ಲಿ ಜಿನುಗುತ್ತಲೆ ಇದ್ದ ಬೆವರನ್ನು ಹೆಗಲ ಮೇಲಿನ ಟವೆಲ್‌ನಿಂದ ಒರೆಸಿಕೊಂಡು ಉಶ್ ಎಂದು ಒಳಗೆ ಅವಿತಿದ್ದ ದಣಿವನ್ನು ಹೊರದೂಡಿದ. ಎಷ್ಟೋ ಹೊತ್ತಿನಿಂದ ನೀರು ಕುಡಿದಿಲ್ಲವೆಂಬುದು ನೆನಪಾಗಿ ಹತ್ತಿರವೆ ಇದ್ದ ಪ್ಲಾಸ್ಟಿಕ್ ಕೊಡವನ್ನೆತ್ತಿ ಗಟಗಟನೆ ಕುಡಿದ. ಎಷ್ಟು ಕುಡಿದರೂ ಒಳಗಿನ ದಾಹ ತೀರುವುದಿಲ್ಲ. ದಿನಾಲೂ ಅವ್ವನಿಗೆ, ತನಗೆ ಮತ್ತು ಆಳು ಕಾಳುಗಳಿಗೆಂದು ನಾಲ್ಕೈದು ಕೊಡ ನೀರು ಬೇಕೇ ಬೇಕಾಗುತ್ತದೆ. ಮೊದಲು ಮಣ್ಣಿನ ಬಿಂದಿಗೆಯಲ್ಲಿ ನೀರು ಸ್ವಲ್ಪ ತಂಪಾದರೂ ಇರುತ್ತಿತ್ತು. ಈಗ ತಂಪೊತ್ತಿನಲ್ಲಿಯೂ ಗಂಗೆ ಬಿಸಿಯಾಗಿರುತ್ತಾಳೆ. ಇನ್ನಷ್ಟು ಹೊತ್ತು ಬಿಟ್ಟು ಬಾವಿಗೆ ಹೋಗಿ ಕೊಡ ತುಂಬಿಸಿಕೊಂಡು ಬರಬೇಕು. ಆದರೆ ರಾತ್ರಿಯ ವೇಳೆ ಆ ಕಡೆ ಕಾಲಿಡಬೇಡವೆಂದು ಅವ್ವ ಹೇಳಿ ಹೋಗಿದ್ದಾಳೆ. ಅವ್ವ ಹಾಗೆ ಹೇಳಲು ಕಾರಣ ಬಾವಿಗೆ ಸಮೀಪವೆ ಇರುವ ದೇವಪ್ಪನ ಹೊಟೇಲು. ಅಲ್ಲಿಗೆ ಹೋದರೆ ಶಿವಣ್ಣ ಮತ್ತು ಮಾಯಕ್ಕ ಸಿಗುತ್ತಾರೆ! ಮೊದಮೊದಲು ತಾನು ಅವರನ್ನು ಕಾಣುತ್ತಿದ್ದೆ. ಆದರೆ ಅವ್ವನಿಗೆ ಅದು ಸೇರಿಕೆ ಬರಲಿಲ್ಲ. ಅವರನ್ನು ಭೆಟ್ಟಿಯಾದರೆ, ಅವರೊಂದಿಗೆ ಮಾತನಾಡಿದರೆ ತನ್ನ ಆಣೆ ಎಂದು ಅವ್ವ ತಾಕೀತು ಮಾಡಿದ್ದಾಳೆ.

ಅವ್ವ ಹಾಗೆ ಹೇಳಿಹೋದ ಮಾತಿನಲ್ಲಿ ಅದೊಂದೇ ಕಾರಣವಿರಲಿಕ್ಕಿಲ್ಲವೆಂದು ಸಿದ್ದೂನ ಒಳಮನಸ್ಸಿಗೆ ಹೊಳೆಯಿತು. ತಾನು ನೀರಿಗೆಂದು ಹೋದಾಗ ಬಾವಿಗೆ ಅಣತಿ ದೂರದಲ್ಲಿಯೆ ಇರುವ ದೇವಪ್ಪನ ಹೊಟೇಲಿನಲ್ಲಿ ಹಗಲುರಾತ್ರಿ ಬಿದ್ದುಕೊಂಡಿರುವ ಅಣ್ಣನನ್ನು ತಾನು ಭೆಟ್ಟಿಯಾದಗೀದೇನು ಎನ್ನುವ ಭಯ ಅವಳಲ್ಲಿರಬೇಕು. ಅಣ್ಣನ ಒಂದಿಂಚೂ ನೆರಳು ತಮ್ಮನಿಗೆ ತಾಕಬಾರದೆಂದು ಕಾಳಜಿ ವಹಿಸುತ್ತಾಳೆ. ಹೊಟೇಲು ಬಂದಾಗಿನಿಂದ ಊರು ಹೊಸ ಕಳೆಯನ್ನೆ ಪಡೆದುಕೊಂಡಿತ್ತು. 'ದೊಡ್ಡ ಮಕ್ಕಳಿಬ್ಬರೂ ಕೈ ಬಿಟ್ಟರು, ಸಣ್ಣ ಹುಡುಗ ಸಾಲಿಗೆ ಹೊಂಟಾನ. ಅಂವನ ಕಡಿಂದ ಏನ ಹೊಲ ಮಾಡ್ಲಿಕ್ಕೆ ಆಗ್ತದ? ಮೂರೂ ಮಕ್ಕಳು ಮೂರಾಬಟ್ಟೆ ಆದವು. ಇನ್ನೇನು ಯಲ್ಲವ್ವನ ಊರ ಮುಂದಿನ ಹೊಲ

